ಆಧಾರವೇ ಹೊರತು ವಿಧಾನ ಸಭಾ ಕ್ಷೇತ್ರದ ಮೇರೆಗೆ ಅಲ್ಲ. ಸರ್ಕಾರವು ವಕ್ಫ್ ಮಂಡಳಿಗೆ ನಿಗಧಿಪಡಿಸಿದ ಅನುದಾನ ಮತ್ತು ರಾಜ್ಯದ ವಿವಿಧ ವಕ್ಫ್ ಸಂಸ್ಥೆಗಳಿಗೆ ವಕ್ಫ್ ಬೋರ್ಡ್‌ನಿಂದ ಮಂಜೂರಾದ ಅನುದಾನದ ವರ್ಷವಾರು ವಿವರ ಈ ಕೆಳಕಂಡಂತಿದೆ:

ಕ್ರಮ. ಸಂಖ್ಯೆ	ವರ್ಷ	ಆಯವ್ಯಯ ಅನುದಾನ	ನಿಗಧಿಪಡಿಸಿದ ಮತ್ತು ಮಂಜೂರಾದ ಮೊತ್ತ	ವೆಚ್ಚ
		ಕೋಟಿ	ಕೋಟಿ	ರೂ.
1.	1994-95	2.00	2.00	1,89,72,500
2.	1995-96	2.00	2.00	1,85,85,000
3.	1996-97	2.00	2.00	1,30,02,500
4.	1997-98	2.00	1.50	1,00,00,000

ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಅನುದಾನ.

25 (7)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಪ್ರದೇಶಾಭಿವೃದ್ಧಿ ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಆಯವ್ಯಯದಲ್ಲಿ ಒದಗಿಸಲಾದ ಅನುದಾನಕ್ಕಿಂತ ಹೆಚ್ಚು ಅನುದಾನ ಒದಗಿಸಲಾಗುವುದೆಂಬ ಕಳೆದ ಆಯವ್ಯಯದ ಅಧಿವೇಶನ ಕಾಲದಲ್ಲಿ ಭರವಸೆಯನ್ನು ನೀಡಲಾಗಿದ್ದಿತು. ಅದರಂತೆ ಒದಗಿಸಲಾದ ಹೆಚ್ಚಿನ ಅನುದಾನ ಎಷ್ಟು?

ಆ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗಿಂತ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಅನುದಾನ ಕಡಿಮೆ ನೀಡಲಾಗಿದೆಯೇ? ಹಾಗಿದ್ದಲ್ಲಿ ಈ ತಾರತಮ್ಯ ನಿವಾರಿಸಲು ಯಾವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.

(ಲಕ್ಷ ರೂ.ಗಳಲ್ಲಿ)

1995-96	1996-97	1997-98	
372.75	418.00	740.00	ಆಯವ್ಯಯದಲ್ಲಿ ಮೀಸಲಾಗಿಡಲಾಗಿರುವ ಅನುದಾನ.

ಆ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು 1995-96ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿಂದ ಪ್ರತಿ ವರ್ಷವೂ ಮಂಡಳಿಗೆ ಹೆಚ್ಚು ಹಣ ನೀಡಲಾಗುತ್ತಿರುವುದನ್ನು ಮೇಲೆ ನೋಡಬಹುದಾಗಿದೆ.

ಬೆಂಗಳೂರು ಕೆ.ಆರ್.ಮಾರ್ಕೆಟ್ ಸಂಕೀರ್ಣಕ್ಕೆ ಖರ್ಚಾದ ಹಣ

28 (62)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೆ.ಆರ್.ಮಾರ್ಕೆಟ್ ಸಂಕೀರ್ಣದ ಕಾಮಗಾರಿಗಳು ಯಾವಾಗ ಪೂರ್ಣಗೊಂಡಿತು?

ಆ) ಈ ಸಂಕೀರ್ಣವನ್ನು ಯಾವಾಗ ಉದ್ಘಾಟಿಸಲಾಯಿತು?

ಇ) ಈ ಸಂಕೀರ್ಣಕ್ಕಾಗಿ ಖರ್ಚು ಮಾಡಿದ ಹಣ ವೆಷ್ಟು?

ಈ) ಈ ಸಂಕೀರ್ಣದ ಕಾಮಗಾರಿಗಳು ಸಮರ್ಪಕವಾಗಿ ನಡೆದಿಲ್ಲವೆಂಬ ದೂರುಗಳು ಬಂದಿವೆಯೇ?

ಉ) ಈ ಕಟ್ಟಡದ ಸುರಕ್ಷತೆಯ ಬಗ್ಗೆ ಅಧ್ಯಯನ ನಡೆಸಲು ಸರ್ಕಾರ ತಜ್ಞರ ಸಮಿತಿಯನ್ನು ನೇಮಿಸುವುದೇ?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) 1996ರಲ್ಲಿ ಪೂರ್ಣಗೊಂಡಿತು.

ಆ) ದಿನಾಂಕ 03-11-1997ರಂದು ಉದ್ಘಾಟಿಸಲಾಯಿತು.

ಇ) ಖರ್ಚು ಮಾಡಿದ ಒಟ್ಟು ಹಣ ರೂ. 34.15 ಕೋಟಿಗಳು.